ದರ್ಶನ್ ಕೆ.ಓ. ಶಿವಮೊಗ್ಗ
ದೇಗುಲಕ್ಕೆ ಬರುವ ಹುಡುಗಿಯರು ಸಾಂಪ್ರದಾಯಿಕ ಉಡುಗೆ ಬಿಟ್ಟು ಟೈಟ್ ಜೀನ್ಸ್, ಟಿಶರ್ಟ್ ಧರಿಸಿ ಬರುವರಲ್ಲಾ...?



ಆ ದಯಾಮಯನಾದ ದೇವನು ಭಕ್ತರ ಏಕಾಗ್ರತೆಯನ್ನು ಪರೀಕ್ಷಿಸುವ ಪರಿ ಇದು.

2ಎಂ.ಎ. ಕುಮಾರ್, ಬೆಂಗಳೂರು
ಸಾವಿನ ನಂತರ ಅವರ ನೆನಪು ಎಲ್ಲಿಯತನಕ?
ಅವರು ಪ್ರಸ್ತುತ ಎನಿಸುವತನಕ. ರಾಮ, ಕೃಷ್ಣ, ಏಸುವನ್ನು ಇಂದಿಗೂ ನೆನೆಯುತ್ತೇವಲ್ಲ.

3ರಾಜೇಶ್ವರಿ ಮಯ್ಯ, ಪುತ್ತೂರು
ಎಲ್ಲಾ ಪ್ರಶ್ನೆಗಳಿಗೆ ಜಾಣ್ಮೆಯಿಂದ ಉತ್ತರಿಸುವ ನೀವು ತೆನಾಲಿ ರಾಮರೇ ಸರಿ. ಏನಂತೀರಿ?
ಮುಖವಾಡ ಧರಿಸಿಯೂ ನಿಮಗೆ ಮುಖ ತೋರದಿರುವುದರಿಂದ ನಾನು ಹಿನ್ನೆಲೆ ರಾಮ ಅಷ್ಟೆ.

ಶಿವಮೊಗ್ಗ ರಮೇಶ್, ಮೈಸೂರು
ಪ್ರಾಣಿಗಳು ಸತ್ತಾಗಲೂ ದೆವ್ವ ಭೂತ ಪ್ರೇತಗಳಾಗುತ್ತವೆಯೆ?



ಊಹೂಂ. ಕಬಾಬ್, ಬಿರಿಯಾನಿ, ಸ್ಟಿಕ್‌ಗಳಾಗುತ್ತವೆ.

ಟಿ. ಜಾಗೃತ, ತುಮಕೂರು
ಮನೆಯಲ್ಲಿ ವಿಷಲ್ ಹೊಡೆಯಬಾರದು ಎನ್ನುತ್ತಾರೆ ನಮ್ಮ ತಾತ. ಏಕೆ?
ಏಕೆಂದರೆ ವಿಷಲ್ ಸದ್ದಿಗೆ ಅಜ್ಜಿಯ ಮಾತು ತಾತನಿಗೆ ಕೇಳಿಸದೆ ಅಜ್ಜಿ ಸಿಟ್ಟಾಗುತ್ತಾರೆ.

ಕುಣಿಗಲ್ ಜಯಣ್ಣ, ಪಾಂಡವಪುರ
ಹಣ, ಪ್ರೀತಿ, ಸ್ನೇಹ, ಆರೋಗ್ಯ ಎಲ್ಲಾ ಇದ್ದರೂ ಉಲ್ಲಾಸವಿಲ್ಲವಲ್ಲಾ, ಏನು ಮಾಡೋದು?
ಕೂಡಲೆ ಟಿ.ವಿ ಕೇಬಲ್ ಕಿತ್ತುಹಾಕಿ, ಬೇಸಿಕ್ ಮೊಬೈಲ್ ಸೆಟ್ ಕೊಳ್ಳಿ.

ಸುಬ್ಬಲಕ್ಷ್ಮಿ ಹೆಚ್.ಕೆ. ಕೋಲಾರ
ದೀಪಾವಳಿ ಬದಲಿಗೆ ದಿವಾಳಿ/ಲಿ ಕನ್ನಡದಲ್ಲೂ ಏಕೆ ಬಂತು?
ಉತ್ತರಭಾರತೀಯರಿಗೆ ಎಡೆ ನೀಡಿ ಕನ್ನಡಿಗರೇ ದಿವಾಳಿಯಾದಾಗ ಪದ ಬಂದದ್ದೇನು ಮಹಾ!

ಅನಸೂಯಾ ಟಿ, ಕೇದಿಗೆಮನೆ
ನಮ್ಮ ಮನೆಯ ಬೆಕ್ಕು ಕಣ್ಣು ಬಿಟ್ಟುಕೊಂಡೇ ಹಾಲು ಕುಡಿಯುತ್ತಿದೆಯಲ್ಲಾ...?
ದಿನವೂ 'ವಿಷ' ಸೀರಿಯಲ್ಸ್ ನೋಡೀ ನೋಡೀ ಮನೆಯವರ ಮೇಲೆ ನಂಬಿಕೆ ಕಳೆದುಕೊಂಡಿದೆಯಂತೆ.

ಮಲ್ಲಿಕಾರ್ಜುನ ಎಸ್.ಬಿ. ಊರಿಲ್ಲ
ಆಡಳಿತದಲ್ಲಿದ್ದಾಗ ತಾವು ಮಾಡದ್ದನ್ನು ವಿಪಕ್ಷ ಅಧಿಕಾರಕ್ಕೆ ಬಂದಾಗ ಮಾಡಿ ಅನ್ನುತ್ತಿದ್ದಾರಲ್ಲ?
ಆಳ ನೋಡಲು ಕಂಡವರ ಮಕ್ಕಳನ್ನು ಬಾವಿಗೆ ತಳ್ಳುವುದು ವಾಡಿಕೆ.

ಬಿ.ಆರ್. ಉಷಾ, ಬೆಂಗಳೂರು
ಕಳ್ಳ ಕುಳ್ಳನಿಗೆ ವ್ಯತ್ಯಾಸವೇನು?
ಕುಳ್ಳನದು ಕೇವಲ ದೈಹಿಕ ಕುಬ್ಜತೆ; ಕಳ್ಳನದು ಔದ್ಯೋಗಿಕ, ಸಾಂಸಾರಿಕ, ವೈಚಾರಿಕ ಕುಬ್ಜತೆ.

ವಿ. ಹೇಮಂತ ಕುಮಾರ್, ಬೆಂಗಳೂರು
ಪೆಟ್ರೋಲ್ ಬೆಲೆ ಮಧ್ಯರಾತ್ರಿಯಲ್ಲೇ ಹೆಚ್ಚಾಗುತ್ತದೆ. ಏಕೆ ಸರ್?
ಸರ್ಜಿಕಲ್ ಸ್ಟ್ರೈಕ್‌ಗೆ ರಾತ್ರಿಯೇ ಸೂಕ್ತ. ತೈಲ ಬೆಲೆಯೇರಿಕೆ ತೈಲೋದ್ಯಮಿಗಳ ಸರ್ಜಿಕಲ್ ಸ್ಟ್ರೈಕ್.

ಬಾ.ರಂ. ಸುರೇಶ, ಶಿವಮೊಗ್ಗ
ನನ್ನವಳು ನನ್ನೊಡನೆ ಮುನಿಸಿಕೊಂಡಿದ್ದಾಳೆ. ಹೇಗೆ ಸಮಾಧಾನ ಮಾಡಲಿ?
ಸಿಕ್ಕ ನೆಮ್ಮದಿಯ ಸಮಯವನ್ನು ಸಂತೋಷದಿಂದ ಕಳೆಯಿರಿ. ಪರಿಹಾರದ ಪಟ್ಟಿ ಅತ್ತಲಿಂದಲೇ ಬರುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು
ರಾಜಕಾರಣಿ ಮಾಡುವ ಪ್ರತಿ ತಪ್ಪಿಗೂ ಕ್ಷಮೆ ಇರುತ್ತದೆಯಲ್ಲಾ...?
ಕೃಷ್ಣ ಶಿಶುಪಾಲನ ನೂರು ತಪ್ಪು ಕ್ಷಮಿಸಿದ್ದೇ ಇದಕ್ಕೆ ಬುನಾದಿಯಂತೆ.

## ಬಹುಮಾನಿತ ಪ್ರಶ್ನೆ

ಬಿ.ಸಂ. ಸುಬ್ಬಣ್ಣ, ಬೆಂಗಳೂರು
'ಶುಭ ನುಡಿಯೇ ಶಕುನದ ಹಕ್ಕಿ' ಎಂದರೆ ಹಕ್ಕಿ 'ಸುಬ್ಬು ಸುಬ್ಬು' ಎನ್ನುತ್ತದಲ್ಲಾ, ಏನು ಮಾಡಲಿ?
ಓಹ್! ಅದು ಟಿವಿ ನಿರೂಪಕಿಯರು ಸಾಕಿರುವ ಹಕ್ಕಿ; ಉಚ್ಚಾರ ಅಷ್ಟಕ್ಕಷ್ಟೆ.

ಪಿ. ಜಯವಂತ ಪೈ, ಕುಂದಾಪುರ
ಸತ್ತವರ ಎದುರಿಗೆ ತಮಟೆ ಬಾರಿಸುವುದೇಕೆ?
ವ್ಯಕ್ತಿ ನಿಜವಾಗಿ ಸತ್ತಿರುವನೋ ಇಲ್ಲವೋ ಎಂದು ತಿಳಿಯಲು ಅದು ಫೈನಲ್ ಸೌಂಡ್ ಟೆಸ್ಟ್.

ವಿ. ಹಮೀದ್, ವಿಟ್ಲ
ಪ್ರಕೃತಿ ಮುನಿಸಿಕೊಂಡಾಗ ಸುನಾಮಿ. ಪತ್ನಿ ಮುನಿಸಿಕೊಂಡಾಗ?
ಪತಿಯಿಂದ ಭರವಸೆಗಳ ಸುನಾಮಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಪೆನ್ನಿಗೂ, ಗನ್ನಿಗೂ ವ್ಯತ್ಯಾಸವೇನು?



ಪೆನ್ನಿನ ಗುಂಡಿನಿಂದ (ಸೊನ್ನೆ) ಫೇಲ್; ಗನ್ನಿನ ಗುಂಡಿನಿಂದ (passed awayಯಲ್ಲಿನ) ಪಾಸ್.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಕುಡಿತ ಬೇಡವೆನ್ನುವ ಗಾಂಧೀಜಿಯ ಹೆಸರಿನ ರಸ್ತೆಯಲ್ಲಿ ಮದ್ಯದಂಗಡಿಗಳಿರುವುದು ಎಷ್ಟು ಸರಿ?
'ಶತ್ರುವನ್ನು ಪ್ರೀತಿಸು' ಎಂದಿದ್ದೂ ಗಾಂಧಿಯೇ. ಮದ್ಯ ಮಾನವನ ಶತ್ರು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಪ್ರೀತಿಯ ಪ್ರವಾಹಕ್ಕೂ, ನೀರಿನ ಪ್ರವಾಹಕ್ಕೂ ಏನು ವ್ಯತ್ಯಾಸ?
ನೀರಿನ ಪ್ರವಾಹ ದಡ ಕೆಡವುತ್ತದೆ, ಪ್ರೀತಿಯ ಪ್ರವಾಹ ದಡ ಸೇರಿಸುತ್ತದೆ.

ಸ್ವಾತಿ ಎಂ.ಎಸ್. ಗೌರಿಬಿದನೂರು
ನಗುವಿನಲ್ಲಿ 'ನೋವು' ಗುರುತಿಸುವುದು ಹೇಗೆ?
ತುಟಿಯರಳಿಸಿದ ನಗು ಕಣ್ಣನ್ನು ತಲುಪದಿದ್ದರೆ ನೋವು ಇರುವುದು ಖಚಿತ.

■ ರಾಮ್